ಹೇಳ್ತೀನಿ, ಆಯ್ತಾ?"

ಸೆರಗಿನ ತುದಿಯನ್ನು ತೋರುಬೆರಳಿಗೆ ಸುತ್ತುತ್ತಾ ಸಂಕೋಚದಿಂದ ತಲೆ ಬಗ್ಗಿಸಿ ವಿನಂತಿಸಿಕೊಂಡಳು ಚಂಪಾ,

"ಆ ದುಡ್ಡನ್ನ ಅಣ್ಣನ ಕೈಗೆ ಕೊಡೋದು ಬೇಡ ಅಮ್ಮಾ. ನಂಗೇ ಕೊಟ್ರೆ ಎಂತಾರೂ ಕೈಖರ್ಚಿಗೆ ಒದಗುತ್ತೆ..."

"ಆಯ್ತು ಕಣೇ... ನಾನೇ ನಿನ್ನ ಕೈಗೆ ಕೊಡ್ತೀನಿ, ಸೈಯಾ?" ಆಶ್ವಾಸನೆ ಕೊಟ್ಟರು ಸುಭದ್ರಮ್ಮ. ಎಷ್ಟು, ಏನು, ಯಾವ ಪ್ರಶ್ನೆಯನ್ನೂ ಮಾಡಲಿಲ್ಲ ಚಂಪಾ. ಅವಳು ದುಡ್ಡಿನ ಮಕ ನೋಡಿ ಯಾವ ಕಾಲ ಆಯ್ತೋ? ಅಣ್ಣನ ಮನೆ ಸೇರಿಕೊಂಡಿದ್ದವಳಿಗೆ ಊಟ, ಬಟ್ಟೆ ಕೊಟ್ಟು ಸಲಹುತ್ತಿದ್ದಿದ್ದೇ ದೊಡ್ಡ

